

## ಸಕಾಲಿಕ ಲೇಖನ

ಜುಲೈ 18ರ ಸಂಚಿಕೆಯಲ್ಲಿ ಪ್ರವೀಣ ಕುಲಕರ್ಣಿ ಬರೆದ 'ಮೊಬೈಲ್ ಟ್ರಬಲ್' ಲೇಖನ ಮಾಹಿತಿಪೂರ್ಣವಾಗಿದೆ. ಸದ್ದಿಲ್ಲದೆ ವಾಮನನಂತೆ ಬಂದು ಈಗ ತ್ರಿವಿಕ್ರಮನಂತೆ ಸರ್ವವ್ಯಾಪಿಯಾಗಿ, ದಿನನಿತ್ಯದ ಕಾರ್ಯಕ್ರಮಗಳಿಗೂ ಮೊಬೈಲ್ ಅನ್ನು ಅವಲಂಬಿಸಬೇಕಾದ ಪರಿಸ್ಥಿತಿಯಿದೆ. ವಿದ್ಯಾರ್ಥಿಗಳ, ಯುವಜನರ ಕ್ರಿಯಾಶೀಲತೆಯನ್ನೇ ಹಾಳುಮಾಡುತ್ತಿರುವ ಈ ರಾಕ್ಷಸನ ಕಪಿಮುಷ್ಟಿಯಿಂದ ಪಾರಾಗುವುದಕ್ಕೆ ಪರಿಹಾರಗಳನ್ನು ವಿವರವಾಗಿ ಸೂಚಿಸಿರುವುದು ಸಕಾಲಿಕವಾಗಿದೆ. ಎಚ್ಚರಿಕೆಯ ಕರೆಗಂಟೆಯಂತೆ ಇಂಥ ಲೇಖನಗಳ ಅಗತ್ಯವಿದೆ.

—ಶಿವಸ್ವಾಮಿ ನೇನೇಕಟ್ಟೆ, ನಿರ್ಮಲಾ ಶ್ರೀನಿವಾಸ, ಬೆಂಗಳೂರು

## ಕಂದು ಗಿಣಿಯೋ ಬೂದು ಗಿಣಿಯೋ?

'ಕಂದು ಗಿಣಿ: ಏನು ವಿಶೇಷ?' (ಎನ್. ವಾಸುದೇವ್) ಲೇಖನ ಮಾಹಿತಿಪೂರ್ಣವಾಗಿದೆ. ಆದರೆ ಇದು ಬೂದು ಗಿಣಿ ಅಲ್ಲವೇ? ಇಂಗ್ಲಿಷ್‌ನ ಬ್ರೌನ್ ಕನ್ನಡದಲ್ಲಿ ಕಂದು. ಗ್ರೇ ಅಂದರೆ ಬೂದು ಬಣ್ಣ.

— ಶ್ರೀಶ, ಬೆಂಗಳೂರು.

## ಬಾರೋ ಬಾರೋ ಮಳೆರಾಯ

ಉತ್ತರ ಕರ್ನಾಟಕದ ಹಳ್ಳಿ ಸೊಗಡು ಎಷ್ಟ್ ಛಂದದರಿ ಮಹಾರಾಯರ! ದೇವ್ರು ಹನಾ ಬಿಟ್ವಾನ, ಆ ಮಾತು ಖ್ಯಾರೆ. ಅದ್ರ ಮಳಿದ್ಯಾವ್ರ ಮ್ಯಾಲ ಭರೋಸಾ ಇಟ್ಟು ಗುರ್ಜಿ ಪೂಜಾ ಮಾಡಿ ಜ್ವಾಳಾ,. ಗೋಧಿ ಗ್ವಾಳಿ ಮಾಡಿ ಪಾರಗೋಳಿಗ ಊಟರೇ ಹಾಕ್ಯಾರಲ್ರೀ... ಅದೇ ಪುಣ್ಯಾ... ಯ್ಯಾನರೆ ಆಗ್ಲಿ, ಹ್ಯಾಂಗರೆ ಆಗ್ಲಿ, ಆ ಪಾರಗೋಳ ತ್ರಾಸ್ ನೋಡಿರೆ ಮಳಿ ಬರ್ಲಿ. ಯ್ಯಾನಂತೀರಿ? ಹಿಂಥಾ ಹಳ್ಳಿ ಹಾಡ ಹಾಡಿದ ಸುಧಾಳ ಬಾಯಿಗ ಕಿಲೋ ಬೆಲ್ಲ ಹಾಕ್ತೇನಿ.

—ಪಂಡಿತರಾವ ಪಾಟೀಲ, ವಿಜಯಪುರ

## ಸಮಯೋಚಿತ ಆರೋಗ್ಯ ಲೇಖನ

ಜುಲೈ 18ರ ಸಂಚಿಕೆಯಲ್ಲಿ ಪ್ರಕಟವಾದ 'ಮೆದುಳು ಜ್ವರ ಎಚ್ಚರ' (ಡಾ. ವಿನಯ ಶ್ರೀನಿವಾಸ್ ) ಆರೋಗ್ಯ ಲೇಖನ ಸಮಯೋಚಿತ. ದೂರದ ಬಿಹಾರ, ಅಸ್ಸಾಂಗಳಲ್ಲಿ ಕಾಣಿಸಿರುವ **encephalitis** ಆತಂಕ ನಮ್ಮನ್ನೂ ಕಾಡಿತ್ತು. ಸರಿಯಾದ ಸಮಯಕ್ಕೆ ನಿಮ್ಮಿಂದ ಮಾಹಿತಿಯುಳ್ಳ ಬರಹ ಪ್ರಕಟವಾಯಿತು.

—ಯುವರಾಜ್ ಹೆಗಡೆ, ಮೇಗರವಳ್ಳಿ

## 'ಜಮಾಲೀ ಕಮಾಲೀ' ಕಾಡುವ ಚಿತ್ರಗಳು

ಜುಲೈ 18ರ ಸಂಚಿಕೆಯಲ್ಲಿ ಪ್ರಕಟಗೊಂಡ, ಪ್ರತೀಕ್ ಮುಕುಂದರ 'ಜಮಾಲೀ ಕಮಾಲೀ' ಬರಹ ನನ್ನನ್ನು ತಟ್ಟಿತು. ಮೊದಲ ನೋಟಕ್ಕೆ ಪ್ರವಾಸ ಕಥನದಂತೆಯೂ, ಕ್ರಮೇಣ ಪ್ರವಾಸವೊಂದರಲ್ಲಿ ಸೆರೆಹಿಡಿದ ಚಿತ್ರಗಳ ಕೊಲಾಜಿನಂತೆಯೂ ಕಾಣಿಸುವ ಈ ಬರಹವು, ಆನಂತರದಲ್ಲಿ ಮೇಲಿನವೆರಡನ್ನೂ ಒಳಗೊಳ್ಳುತ್ತಲೇ ಅವನ್ನು ಮೀರಿದ ಸೊಗಸಾದ ಕಥನದ ಸ್ವರೂಪ ತಾಳಿಬಿಡುತ್ತದೆ. ಬರಹಗಾರರು, ದಿಲ್ಲಿ, ಅಲ್ಲಿನ ವಸಂತ್ ಕುಂಜ್, ಜಾಮಾ ಮಸ್ಜೀದ್, ಬಿಸಿಲಿಗೆ ಕಾದ ಅದರ ಮೆಟ್ಟಿಲುಗಳು, ಅದರ ಮಿನಾರುಗಳು ಮತ್ತು ಒಳ ಮೆಟ್ಟಲುಗಳ ಇರುಕಿನಲ್ಲಿ ಹತ್ತಿಳಿಯುವ ಜನರಿಗೆ ಸಂಬಂಧಿಸಿದ ಮೂರ್ತವಾದ ವಿವರಗಳನ್ನು ಒದಗಿಸುತ್ತಲೇ, ಯಾವುದೋ ಮಾಯದಲ್ಲಿ ಅವೇ ಚಿತ್ರಗಳೊಳಗಿನ ಅಮೂರ್ತತೆಯೆಡೆಗೆ ಓದುಗರ ಮನಸ್ಸನ್ನು ತಿರುಗಿಸಿಬಿಡುತ್ತಾರೆ. ಹಾಗೇ, ಪಿಯಾನೋ ಬಾರಿನ ವಿವರಗಳೂ ಹೊಸತೇ ಬಗೆಯ ವರ್ಣಚಿತ್ರವೊಂದನ್ನ ನೋಡಿದ ಅನುಭವವನ್ನು ಮನಸ್ಸಿನಲ್ಲಿ ಉಳಿಸಿಬಿಡುತ್ತವೆ. ಸಪ್ಪೆಯಾದ ವ್ಯಕ್ತಿಚಿತ್ರವಾಗಿ ಬಿಡುವ ಅಪಾಯವಿದ್ದ ವಿಜಯ ಕಾಟೇಯವರೊಂದಿಗಿನ ಮಾತಿನ ಸನ್ನಿವೇಶವು ಲೇಖಕರ ಕರಾಮತ್ತಿನಿಂದಾಗಿ ಕಾಡುವ ಮತ್ತು ಬಹುಕಾಲ ನೆನಪಿನಲ್ಲುಳಿಯುತ್ತದೆ.



ಕ್ವೀರ್ ಸಮಾಜದ ಕುರಿತ ವಿವರಗಳನ್ನು, ಅಲ್ಲಿನ ಪಾರಿಭಾಷಿಕ ಪದಗಳನ್ನು (ಉದಾಹರಣೆಗೆ 'ಕಮಿಂಗ್ ಔಟ್'), ಅಲ್ಲಿನ ಸಂಬಂಧಗಳನ್ನು ಒಂದಿನಿತೂ ಕೃತಕ ಅನ್ನಿಸದ ರೀತಿಯಲ್ಲಿ ತಮ್ಮ ಬರಹದಲ್ಲಿ ನೇಯುವ ಲೇಖಕರು, ಓದುಗರನ್ನು ಬೆರಗಿನ ಲೋಕವೊಂದರ ತುಸುವೇ ತೆರೆದಿರುವ ಬಾಗಿಲಿನೆದುರು ನಿಲ್ಲಿಸುತ್ತಾರೆ. ಎಲ್ಲವಕ್ಕೂ ಲೇಬಲ್‌ಗಳನ್ನು ಅಂಟಿಸಿಬಿಡುವ, ವ್ಯಕ್ತಿವ್ಯಕ್ತಿಗಳ ನಡುವಿನ ನಂಟನ್ನು 'ಇದಿಷ್ಟೇ' ಎಂದು ಅಳೆದುಬಿಡುವ ಕಾತರದಲ್ಲಿರುವ ಇಂದಿನ ದಿನಮಾನಗಳಲ್ಲಿ 'ಜಮಾಲೀ ಕಮಾಲೀ'ಯರ ಕಥನವು ಅದೆಷ್ಟು ಭಿನ್ನವಾಗಿ ನಿಲ್ಲುತ್ತದೆ! ಜಮಾಲಿ ಮೂರ್ತ ಸ್ವರೂಪದವನಾಗಿ ವಿವರಗಳ ಮೂಲಕ ಗೋಚರಿಸಿದರೆ, ಕಮಾಲಿಯು ಇದ್ದೂ ಇಲ್ಲದ ಅಮೂರ್ತನಾಗಿಯೇ ಕಾಡುತ್ತಾನೆ, ಥೇಟ್ ಈ ಲೇಖನದಂತೆ. ಕ್ವೀನ್ ಸೈಜ್ ಪ್ರದರ್ಶನದಲ್ಲಿ, ಗಂಡಸರೆಂಬ ಸೀಮಿತ ಚೌಕಟ್ಟಿನಲ್ಲಿರುವಂತೆ ಕಂಡುಬರುವ ವ್ಯಕ್ತಿಗಳಿಬ್ಬರು, ಕ್ರಮೇಣ ಎರಡು ವ್ಯಕ್ತಿಗಳಂತೆ ಗೋಚರಿಸಿ, ಕೊನೆಗೆ ಹೇಗೆ ಎರಡು ಆಕೃತಿಗಳಷ್ಟೇ ಆಗಿಬಿಡುತ್ತಾರೋ, ಹಾಗೆ ವ್ಯಾವಹಾರಿಕ ವಿವರಗಳೊಂದಿಗೆ ಆರಂಭವಾಗುವ ಬರಹವು ಕೊನೆಯ ಹಂತಕ್ಕೆ ಬರುವಷ್ಟರಲ್ಲಿ ನಾಮಕರಣವಾಗಿರುವ ಜಗತ್ತಿನ ವ್ಯಾಪಾರಗಳಾಚೆಗಿನ, ಹೆಸರಿಸಲಾಗದ ಹೊಸತೊಂದನ್ನು ಓದುಗರೆದುರಿಗಿಡುತ್ತದೆ..

—ಕಾರ್ತಿಕ್ ಆರ್.

## ವಿಜಯಪಥದ ಸ್ಮರಣೆ

ಬಿ. ವಿಜಯ ರೆಡ್ಡಿ ಅವರ ಕುರಿತು ಎಷ್ಟು ಜನರಿಗೆ ನೆನಪಿದೆಯೋ ತಿಳಿಯದು; ಆದರೆ ಅವರ ನಿರ್ದೇಶನದ ಚಿತ್ರಗಳನ್ನು ಚಿತ್ರರಸಿಕರು ಮರೆಯಲಾರರು. ಅವು ಹಲವು ದಶಕಗಳನಂತರವೂ ಮೌಲ್ಯವನ್ನುಳಿಸಿಕೊಂಡಿವೆ. ಆ ಚಿತ್ರಗಳಲ್ಲಿ ಬಳಸಿಕೊಂಡ ಗೀತೆಗಳೂ ಸಹೃದಯರ ಸ್ಮರಣೆಯಲ್ಲಿದೆ. ಜುಲೈ18ರ ಸಂಚಿಕೆಯಲ್ಲಿ ವಿಜಯ್ ಕುರಿತು ಲೇಖನ ಬರೆದ ಬೆಳಚಿಕ್ಕನಹಳ್ಳಿ ಶ್ರೀನಾಥ್ ಅವರಿಗೆ ಧನ್ಯವಾದ.

—ಕೊ.ಸು.ನರಸಿಂಹ ಮೂರ್ತಿ ಮೈಸೂರು,
ಆನಂದ್ ಕುಮಾರ್ ಚಿತ್ರದುರ್ಗ,
ಸುಂದರ್ ಬೆಂಗಳೂರು

## ಕಥೆಯಲ್ಲ, ಬದುಕು

ಜುಲೈ 18ರ ಸಂಚಿಕೆಯಲ್ಲಿ ಪ್ರಕಟವಾದ ಸವಿತಾ ನಾಗಭೂಷಣ ಅವರ ಕಥೆ 'ಅಜ್ಜಿ ಕರೆದ ಹಾಗಾಯಿತು' ಕುತೂಹಲದಿಂದ ಓದಿಸಿಕೊಂಡು ಹೋಯಿತು. ಇದು ಕಥೆ ಅಲ್ಲ, ತಮ್ಮಣ್ಣ ಅವರಂಥ ಹಿರಿಯ ಜೀವಿಗಳ ಬದುಕಿನ ವಾಸ್ತವ ಅನಿಸಿತು.

—ನಾರಾಯಣ ಯಾಜಿ, ಶಿರಾಲಿ.
ಪ.ಚಂದ್ರಕುಮಾರ ಗೌನಹಳ್ಳಿ

## ಜಯಚಾಮರಾಜರ ಸ್ಮರಣೆ

ಜುಲೈ 18ರ ಸಂಚಿಕೆಯಲ್ಲಿ, ನಾಡಿನಲ್ಲಿ ಅನೇಕ ಸಂಸ್ಥೆಗಳ ಸ್ಥಾಪನೆಗೆ ಕಾರಣಕರ್ತರಾಗಿದ್ದ, ದಸರಾ ಉತ್ಸವಕ್ಕೆ ಸಾಂಸ್ಕೃತಿಕ ಮೆರುಗು ನೀಡಿದ್ದ, ಕರ್ನಾಟಕ ಸಂಗೀತವನ್ನು ಆಳವಾಗಿ ಅಭ್ಯಾಸ ಮಾಡಿದ್ದ, ರಾಜ್ಯಪಾಲರಾಗಿ ಕಾರ್ಯನಿರ್ವಹಿಸಿದ್ದ, ಜಯಚಾಮರಾಜ ಒಡೆಯರ್ ಅವರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ, ದಾರ್ಶನಿಕ ರಾಜನೊಬ್ಬನ ಸಾಧನೆಗಳನ್ನು ಜಗನ್ನಾಥ ಪ್ರಕಾಶ್ ಎನ್. ಸೊಗಸಾಗಿ ವಿವರಿಸಿದ್ದಾರೆ.

—ಪಿ. ಜಯವಂತ ಪೈ,ಕುಂದಾಪುರ.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in